'ಲಕ್ಷವಾಗಲೀ.. ಎರಡು ಲಕ್ಷವಾಗಲಿ... ಹೋದದ್ದು ಹೋಯಿತು. ಪೊಲೀಸು ಕಂಪ್ಲೇಂಟು ಕೊಟ್ಟು ಬರೋಣ. ಈ ಕಳ್ಳ ಖದೀಮರು ಅಕಸ್ಮಾತ್ ಎಲ್ಲಾದರೂ ಅರೆಸ್ಟಾದರೆ ಸರ ವಾಪಸ್ಸು ಸಿಕ್ಕಿದರೂ ಸಿಗಬಹುದು...' ರಾಯರು ತಾವು ಮನಸ್ಸೀ ಹಾಗೊಂದು ಆಸೆ ಇಟ್ಟುಕೊಂಡಿರದಿದ್ದರೂ ಹೆಂಡತಿಯ ಸಮಾಧಾನಕ್ಕೆ ಹಾಗಂದಿದ್ದರು.

ದುಃಖ ದುಮ್ಮಾನಗಳೊಂದಿಗೆ ಮನೆ ಸೇರಿ, ಇಲ್ಲದ ಮನಸ್ಸಿನಲ್ಲೇ ಉಪಾಹಾರ ಮುಗಿಸಿ, ಹತ್ತೂವರೆ ಸುಮಾರಿಗೆ ಅವರು ಪೊಲೀಸ್ ಸ್ಟೇಶನ್ ತಲುಪಿದರು. ಎಸ್.ಐ. ಅನುಪಸ್ಥಿತಿಯಲ್ಲಿ ಹೆಡ್ ಕಾನ್‌ಸ್ಟೆಬಲ್ ಘಟನೆಯ ವಿವರ ಕೇಳಿಸಿಕೊಂಡ. 'ನೀವು ಹೊದೆದಿದ್ದ ಶಾಲನ್ನು ತೆಗೆದದ್ದೇ ತಪ್ಪು. ಸರ ಹೊರಗೇ ಕಾಣುತ್ತಿತ್ತು... ಈ ಬದ್ಮಾಶ್ ಲೋಫರುಗಳು ಹದ್ದಿನ ಥರಾ ಎಲ್ಲಿಂದಲೋ ವಕ್ರದೃಷ್ಟಿ ಹಾಕಿರುತ್ತಾರೆ. ಮತ್ತೆ ನೀವು ವಯಸ್ಸಾದವರು... ಅವರ ಕೆಲಸ ಸುಲಭವಾಯಿತು' ಅಂದ. 'ನಾವು ನಮ್ಮ ಠಾಣೆಯ ವ್ಯಾಪ್ತಿಯಲ್ಲೆಲ್ಲ ಲೌಡ್ ಸ್ಪೀಕರಿನಲ್ಲಿ 'ಸರಗಳ್ಳರಿದ್ದಾರೆ ಜಾಗರೂಕರಾಗಿರಿ' ಎಂದು ಜನರಿಗೆ, ವಿಶೇಷವಾಗಿ ಮಹಿಳೆಯರಿಗೆ ಸಂದೇಶ ನೀಡಿದ್ದೇವೆ. ಇದಕ್ಕಾಗಿ ಮೂರುಲಕ್ಷ ಖರ್ಚು ಮಾಡಿದ್ದೇವೆ. ನೀವು ಕೇಳಿಸಿಕೊಳ್ಳಲಿಲ್ಲವಾ? ಈಗ ಯಾರನ್ನು ದೂರುವುದು? ಕಳ್ಳರು ಎಲ್ಲಿದ್ದಾರೆ ಅಂತ ಹುಡುಕುವುದು?' ಎಂದು ಸಿಡುಕು ಪ್ರದರ್ಶಿಸಿದ.

ತನ್ನ ಮೇಲೆಯೇ ಗೂಬೆ ಕೂರಿಸುವ ಆತನ ಮಾತಿಗೆ ಲೀಲಕ್ಕ ಅಸಮಾಧಾನಗೊಂಡಿದ್ದರು. ಸುಮ್ಮನಿದ್ದ ರಾಯರನ್ನು ಉದ್ದೇಶಿಸಿ ಆತ, 'ಕಂಪ್ಲೇಂಟ್ ಬರೆದು ಕೊಟ್ಟಿರಿ, ಎಸ್.ಐ. ಹೇಳಿದ್ರೆ ಕೇಸ್ ರಿಜಿಸ್ಟರ್ ಮಾಡಿಕೊಳ್ತೀನಿ, ಇಂತಹ ಸಣ್ಣಪುಟ್ಟ ಕೇಸುಗಳನ್ನು ತನಿಖೆ ಮಾಡುವುದಕ್ಕೆ ಯಾರಿಗೂ ಸಮಯವಿಲ್ಲ. ರಿಜಿಸ್ಟರ್ ಮಾಡಿದ ಕೇಸು ಇತ್ಯರ್ಥ ಮಾಡದಿದ್ದರೆ ಎಸ್ಪಿ ಆಫೀಸಿಂದ ಸುಮ್ಮನೆ ಕಿರ್ಕಿರಿ ಮಾಡುತ್ತಾರೆ. ಅಜ್ಜಿ ಪುಣ್ಯಕ್ಕೆ ಸರಗಳ್ಳರೇನಾದರೂ ಸಿಕ್ಕಿಬಿದ್ರೆ ಕೇಸು ಹಾಕಿ ನಿಮಗೆ ಹೇಳಿ ಕಳಿಸ್ತೇವೆ' ಎಂದು ಹೇಳಿ ಇವರನ್ನು ಸಾಗಹಾಕಿದ.

'ಇವರಿಗೆಲ್ಲ ಕಳ್ಳರ ಪರಿಚಯವಿರುತ್ತೆ. ಒಂದೈನ್ನೂರು ಕೊಟ್ಟಿದ್ರೆ ಹುಡುಕಿಕೊಡುತ್ತಿದ್ದರೋ ಏನೋ' ಎಂದರು ಲೀಲಕ್ಕ. ರಾಯರು ಅದಕ್ಕೂ ಮರುಮಾತಾಡದೆ ಮನೆಗೆ ಹೊರಟಿದ್ದರು. ದಾರಿಯಲ್ಲಿ 'ಐನೂರು ಕೊಟ್ರೆ ಅದೂ ಹೋಗುತ್ತಿತ್ತು... ಕಳ್ಳ ಸಿಕ್ಕಿದ್ದಾನೆ ಅಂತ ಫೋನ್ ಮಾಡಲಿ, ಆಗ ನೋಡೋಣ' ಅಂದರು ರಾಯರು.

ಒಂದೆರದು ದಿನ ನೆರೆಕರೆಯಲ್ಲೆಲ್ಲ ಇದೇ ಮಾತು. ವಾರ ಕಳೆದಂತೆ ಎಲ್ಲರೂ ಸರದ ಬಗ್ಗೆ ಮರೆತು ಬಿಟ್ಟರು. ರಾಯರು ಇನ್ನೂ ಒಂದೆರಡು ಬಾರಿ ಪೊಲೀಸ್ ಸ್ಟೇಶನ್ನಿಗೆ ಪ್ರದಕ್ಷಿಣೆ ಬಂದರು. ಕಾದು ಕುಳಿತು ಎಸ್.ಐಯನ್ನೂ ಭೇಟಿಯಾದರು. ಯಾವುದೂ ಪ್ರಯೋಜನವಾಗಲಿಲ್ಲ. ಕಾದು ಕಾದು ಬೇಸತ್ತ ಲೀಲಕ್ಕ ಇದ್ದ ಬೇರೊಂದು ಸಣ್ಣ ಚೈನನ್ನು ಕರಿಮಣಿಸರವಾಗಿ ಮಾರ್ಪಡಿಸಿ ಹಾಕಿಕೊಂಡರು.

★★★

ಮುಖ್ಯರಸ್ತೆಗೆ ತಾಗಿ ಅವರ ಮನೆ. ಕಾರ್ನರ್ ಸೈಟಿನಲ್ಲಿ ಕಟ್ಟಿದ್ದು. ಹಾಗಾಗಿ ಮನೆಯ ಎಡಬದಿಯಲ್ಲಿಯೂ ಅಡ್ಡರಸ್ತೆ ಹಾದುಹೋಗುತ್ತಿತ್ತು. ಹತ್ತು ವರ್ಷಕ್ಕೂ ಹಳತಾದ ಮನೆಯಾಗಿದ್ದರೂ ಉತ್ತಮವಾಗಿ ಇಟ್ಟುಕೊಂಡಿದ್ದರಿಂದ ಇನ್ನೂ ಹೊಸತರಂತೆಯೇ ಕಾಣುತ್ತಿತ್ತು. ವೆಂಕಟರಾಯರು ಮತ್ತು ಲೀಲಕ್ಕ ಇಬ್ಬರೂ ಸರ್ವೀಸಿನಲ್ಲಿದ್ದಷ್ಟೂ ಕಾಲ ಬಾಡಿಗೆಮನೆಯಲ್ಲೇ ಇದ್ದವರು. ರಾಯರಿಗೆ ಮೊದಲೇ ರಿಟೈರ್ ಆಗಿದ್ದರೂ ಲೀಲಕ್ಕನಿಗೂ